ಶ್ರೀ ಟಿ. ಎನ್. ನರಸಿಂಹಮೂರ್ತಿ :– ನೀವು ಕೇಳಿದರೆ ನಮಗೆ ಭಯವಾಗುತ್ತದೆ. ನೀವು ಕೇಳುವಾಗ ಸರಿಯಾಗಿ ಕೇಳಿ.

ಅಧ್ಯಕ್ಷರು :– ಬಹುಶಃ ಅವರನ್ನು ಕೇಳಿ ಆಮೇಲೆ ನೀವು ಹೇಳಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ :– ವುಡ್‌ಲ್ಯಾಂಡ್ಸ್ ಹೋಟೆಲಿಗೆ ಸಂಬಂಧಪಟ್ಟಂತೆ ಕಾರ್ಮಿಕರು ಮತ್ತು ಆಡಳಿತ ಮಂಡಲಿಯವರ ವ್ಯಾಜ್ಯ ಈಗಾಗಲೇ ಟ್ರಿಬ್ಯುನಲ್ ಮುಂದೆ ಇದೆ. ಅದರ ಬಗ್ಗೆ ಹೆಚ್ಚು ಹೇಳಲು ಹೋದರೆ ಬಹುಶಃ ಸಬ್‌ಜ್ಯುಡೀಸ್ ಆಗಬಹುದು.

ಶ್ರೀ ಎ· ಕೆ. ಆನಂತಕೃಷ್ಣ :– ಸಬ್‌ಜ್ಯುಡೀಸ್‌ಗೂ ಇದಕ್ಕೂ ಸಂಬಂಧವಿಲ್ಲ. ನಾನು ಹೇಳುವುದೇನೆಂದರೆ ಲೇಬರ್ ಇಲಾಖೆಯಲ್ಲಿನ ಸರಿಯಾದ ಜವಾಬ್ದಾರಿಯುತವಾದ ಅಧಿಕಾರಿಯನ್ನು ಅಲ್ಲಿಗೆ ಕಳಿಸಿ, ಅಲ್ಲಿ ತನಿಖೆ ಮಾಡಿ ಮಿನಿಮಮ್ ವೇಜಸ್ ಹಾಗೂ ಬೇರೆ ವಿಚಾರಗಳು ಏನು ಇವೆ ಅವುಗಳು ಕಾರ್ಮಿಕರಿಗೆ ಅನ್ವಯಿಸುವ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡಿದ್ದಾನಾ ಇಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ :– ಮಾನ್ಯ ಸದಸ್ಯರ ಅಭಿಪ್ರಾಯವೇನು ಇದೆ ಅದನ್ನು ಮಾನ್ಯ ಕಾರ್ಮಿಕ ಆಯುಕ್ತರಿಗೆ ತಿಳಿಸಿ, ಇದರ ಬಗ್ಗೆ ಹೆಚ್ಚು ಅಧ್ಯಯನ ಮಾಡಿ ಕಾರ್ಮಿಕರಿಗೆ ಯಾವುದೇ ರೀತಿಯಲ್ಲೂ ಅನ್ಯಾಯವಾಗದಂತೆ ಕನಿಷ್ಠ ವೇತನದ ಬಾಕಿಯನ್ನು ಏನೇನು ರಕ್ಷಣೆ ಸಿಗಬೇಕೋ ಅದು ಸಿಗುವಂತೆ ಮಾಡುತ್ತೇವೆ.

ಅಧ್ಯಕ್ಷರು :– ಕನಿಷ್ಠ ವೇತನವನ್ನು ಸರಕಾರದವರು ಏನು ನಿಗದಿ ಮಾಡಿದ್ದಾರೆ ಅದು ಟ್ರಿಬ್ಯುನಲ್ ಮುಂದೆ ಬರುವುದಿಲ್ಲ.

ಶ್ರೀ ಎ. ಕೆ. ಆನಂತಕೃಷ್ಣ :– ಕನಿಷ್ಠ ವೇತನವನ್ನು ಫಿಕ್ಸ್ ಮಾಡುವುದು ಬರೀ ವುಡ್‌ಲ್ಯಾಂಡ್ ಹೋಟೆಲಿನ ನೌಕರರಿಗೆ ಮಾತ್ರ ಮಾಡುವುದಿಲ್ಲ, ಇಡೀ ರಾಜ್ಯಮಟ್ಟದಲ್ಲಿ ಎಲ್ಲ ಕಾರ್ಮಿಕರಿಗೆ ಮಾಡಬೇಕಾಗಿದೆ. ಆದರೆ ಅವರ ಸಂಖ್ಯೆ ಗೊತ್ತಿಲ್ಲ. ಕ್ಯಾಟಗರಿ ಗೊತ್ತಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಮತ್ತೆ ಮಿನಿಮಮ್ ವೇಜಸ್ ಅನ್ನು ರಿವೈಸ್ ಮಾಡುವ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ? ಮತ್ತು ನಾನು ಪ್ರಸ್ತಾಪ ಮಾಡಿದಂತಹ ವುಡ್‌ಲ್ಯಾಂಡ್ ಹೋಟೆಲ್ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ :– ಮಾನ್ಯ ಸದಸ್ಯರ ಕಳಕಳಿಯನ್ನು ನನ್ನ ಸಹೋದ್ಯೋಗಿಯಾದ ಕಾರ್ಮಿಕ ಸಚಿವರಿಗೆ ತಿಳಿಸಿ ಆದಷ್ಟು ಬೇಗ ಅವರ ಅಭಿಪ್ರಾಯಗಳನ್ನು ಗ್ರಹಿಸಿ ಇದನ್ನು ಸೂಕ್ತ ರೀತಿಯಲ್ಲಿ ಇತ್ಯರ್ಥ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಲ್ಲಿ ಮನವಿ ಮಾಡುತ್ತೇನೆ.

ವಿಷಯ :– ಕರ್ನಾಟಕ ರಾಜ್ಯದ ಪೋಲೀಸ್ ಸ್ಟೇಷನ್‌ಗಳಲ್ಲಿ ಪೋಲೀಸರ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 278 (1178)

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲಾ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದ ಪೋಲೀಸ್ ಸ್ಟೇಷನ್‌ಗಳಲ್ಲಿ ಪೋಲೀಸರ ಸಂಖ್ಯೆ ಕಡಿಮೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಪೋಲೀಸ್ ಸಂಖ್ಯೆ ಜಾಸ್ತಿ ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ ?

ಇ) ಇದ್ದರೆ, ಯಾವಾಗ ಮಾಡಲಾಗುವುದು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಮಂತ್ರಿಗಳು) :

ಅ) ಹೌದು.

ಆ) ಹೌದು.

ಇ) ಇದನ್ನು ಹಂತ ಹಂತವಾಗಿ 5 ವರ್ಷಗಳಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ :– ಕರ್ನಾಟಕ ರಾಜ್ಯದ ಪೋಲೀಸು ಸ್ಟೇಷನ್‌ಗಳಲ್ಲಿ ಪೋಲೀಸರ ಸಂಖ್ಯೆ ಕಡಿಮೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಹೌದು, ಎಂದು ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ, ಪೋಲೀಸರ ಸಂಖ್ಯೆ ಜಾಸ್ತಿ ಮಾಡುವ ಆಲೋಚನೆ ಸರಕಾರಕ್ಕಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ. ಯಾವಾಗ ಮಾಡಲಾಗುವುದು ಎಂದು ಕೇಳಿದಕ್ಕೆ ಪಂಚ ಹಂತವಾಗಿ 5 ವರ್ಷದಲ್ಲಿ ಮಾಡಲಾಗುವುದೆಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿರುವಂಥ ಪೋಲೀಸು ಸ್ಟೇಷನ್‌ಗಳಲ್ಲಿ ಪೋಲೀಸರ ಸಂಖ್ಯೆ ಬಹಳ ಕಡಿಮೆ ಇದೆ, ಬಹುಶಃ 7–8 ಜನ ಇರಬಹುದು. ಪಟ್ಟಣದಲ್ಲಿ ಸುಮಾರು 12 ಜನ ಪೋಲೀಸರು ಇರುತ್ತಾರೆ. ಗ್ರಾಮಾಂತರ ಪ್ರದೇಶದ ಸಾಮಾನ್ಯ ಜನರು ಪೋಲೀಸ್ ಸ್ಟೇಷನ್ನಿಗೆ ಅವರ ಸಮಸ್ಯೆಯೊಟ್ಟಿಗೆ ಹೋದಾಗ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪೋಲೀಸರು ಬರಬೇಕು ಎಂದಾಗ ಪೋಲೀಸರೇ ಇಲ್ಲವೆಂದು ಉತ್ತರ ಕೊಡುತ್ತಾರೆ. ಕಾರಣವೇನೆಂದರೆ, 7 ಜನ ಪೋಲೀಸರಿದ್ದಾಗ ಒಬ್ಬ ಕೋರ್ಟ್‌ನಲ್ಲಿ ಕೆಲಸವಿದ್ದಾಗ ಹೋಗುತ್ತಾನೆ, ಮತ್ತೊಬ್ಬ ಸಮನ್ಸ್ ಕೊಡಲಿಕ್ಕೆ ಹೋಗುತ್ತಾನೆ, ಮತ್ತೊಬ್ಬ ಬೇರೆ ಕೆಲಸದ ಮೇಲೆ ಹೋಗಿರುತ್ತಾನೆ. ಬೇರೆ ಕಡೆ ಗಲಾಟೆಯಾದಾಗ ಎಸ್. ಐ. ಜೊತೆಗೆ ಒಬ್ಬ ಪೋಲೀಸು ಹೋಗಿರುತ್ತಾನೆ. ಹೀಗಾದಾಗ ಅಲ್ಲಿ ಯಾರೂ ಪೋಲೀಸರೇ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಆದಷ್ಟು ಬೇಗ ಈ ಸಂಖ್ಯೆಯನ್ನು ಹೆಚ್ಚು ಮಾಡುವುದು ಅವಶ್ಯಕ ಇದೆ. ಈಗ "ಪಂಚ ಹಂತವಾಗಿ 5 ವರ್ಷಗಳಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿದೆ" ಎಂದು ಸರ್ಕಾರ ಉತ್ತರ ಕೊಟ್ಟಿದೆ. ಈ ವರ್ಷ ಪೋಲೀಸರ ಸಂಖ್ಯೆಯನ್ನು ಜಾಸ್ತಿ ಮಾಡುತ್ತೀರಿ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಬೇಕು. ಹಾಗೂ ಅಗತ್ಯ ಇರತಕ್ಕಂತಹ ಬೇರೆ ಪ್ರದೇಶಗಳಲ್ಲಿ ಕೂಡ ಪೋಲೀಸು ಸ್ಟೇಷನ್‌ಗಳನ್ನು ಜಾಸ್ತಿ ಮಾಡುವಂತಹ ಉದ್ದೇಶ ಸರಕಾರಕ್ಕಿದೆಯೇ? ಇದ್ದರೆ ಅದನ್ನು ಯಾವಾಗ ಮಾಡುತ್ತೀರಿ ? ಇವೆರಡು ಪ್ರಶ್ನೆಗಳಿಗೆ ಉತ್ತರ ಹೇಳಬೇಕು.

ಶ್ರೀ ಧರ್ಮಸಿಂಗ್ :– ಈಗಾಗಲೇ ಒಂದು ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಪ್ರಸ್ತುತ ಪೋಲೀಸು ಇಲಾಖೆಯಲ್ಲಿ ಸಿಬ್ಬಂದಿ ಬಹಳ ಕಡಿಮೆ ಇದೆ. ಶ್ರೀ ಧರ್ಮವೀರರವರ ನ್ಯಾಷನಲ್ ಪೋಲೀಸು ಕಮಿಷನ್ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ. 5 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಅಂದರೆ, ಪಿ.ಎಸ್.ಐ., ಎಸ್. ಐ. ಹೆಡ್ ಕಾನ್‌ಸ್ಟೇಬಲ್, ಪಿ. ಸಿ. ಗಳನ್ನು ರೆಕ್ರೂಟ್‌ಮೆಂಟ್ ಮಾಡಬೇಕೆಂದು ಕಾರ್ಯಕ್ರಮ ತೆಗೆದು ಕೊಂಡಿದ್ದೇವೆ. ಈಗಾಗಲೇ ಅದಕ್ಕೆ 135 ಕೋಟಿ ರೂಪಾಯಿ ಬೇಕಾಗಿದೆ.

ಈ ವರ್ಷ ಐದನೇ ಒಂದರಷ್ಟು ಹಣ ಪ್ರೊವೈಡ್ ಮಾಡಿ ನಾವು ಈ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈಗಾಗಲೇ ರೂರಲ್ ಪೋಲೀಸ್ ಸ್ಟೇಷನ್ ಮತ್ತು ಟೌನ್ ಪೋಲೀಸ್ ಸ್ಟೇಷನ್ ಹಾಗೂ ಸಿಟಿಗಳಲ್ಲಿ ಕೂಡ ಎಷ್ಟು ಪೋಲೀಸ್ ಸ್ಟೇಷನ್‌ಗಳಲ್ಲಿ ಹೆಡ್‌ಕಾನ್‌ಸ್ಟೇಬಲ್‌ಗಳಾಗಲೀ, ಪೋಲೀಸ್ ಕಾನ್‌ಸ್ಟೇಬಲ್‌ಗಳಾಗಲೀ ಎಷ್ಟು ಸಂಖ್ಯೆಯಲ್ಲಿ ಬೇಕು ಎಂಬ ವಿವರಕ್ಕೆ ನಾನು ಹೋಗಲಾರದೆ, ಈಗ ಐದು ವರ್ಷಗಳ ಅವಧಿಯಲ್ಲಿ ಪಿ.ಎಸ್.ಐ.ಗಳು 109, ಎ.ಎಸ್.ಐ.ಗಳು 1051, ಹೆಡ್‌ಕಾನ್‌ಸ್ಟೇಬಲ್‌ಗಳು 1830 ಮತ್ತು ಪಿ.ಸಿ. ಗಳು 6100 ಇಷ್ಟು ನೇಮಕ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇದಕ್ಕೆ 17 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಈ ವರ್ಷ 4 ಕೋಟಿ ರೂಪಾಯಿಗಳ ಪ್ರಪೋಸಲ್ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿದೆ. ಈ ವರ್ಷ ಹಂತಹಂತವಾಗಿ ಕ್ರಮ ತೆಗೆದುಕೊಂಡಿದೆ. ರಿಕ್ರೂಟ್‌ಮೆಂಟ್ ಕಮಿಟಿ ನೇಮಕ ಮಾಡತಕ್ಕಂಥ ಕ್ರಮ ತೆಗೆದುಕೊಂಡಿದ್ದೇವೆ. ರೂರಲ್ ಪೋಲೀಸ್ ಸ್ಟೇಷನ್‌ನಲ್ಲಿ ಮತ್ತು ಟೌನ ಪೋಲೀಸ್ ಸ್ಟೇಷನ್‌ನಲ್ಲಿ ಎಷ್ಟು ಕಾನ್‌ಸ್ಟೇಬಲ್‌ಗಳು ಬೇಕು. ಪಿ. ಎಸ್. ಐ. ಗಳು ಬೇಕು ಎಂದು ವರದಿಯಲ್ಲಿ ನಿಗದಿ ಮಾಡಿದೆ, ಆ ಆಧಾರದ ಮೇಲೆ ತೆಗೆದುಕೊಳ್ಳಬೇಕೆಂದು ಸರ್ಕಾರದಲ್ಲಿ ಈಗಾಗಲೇ ನಿರ್ಧಾರ ತೆಗೆದು ಕೊಂಡಿದ್ದೇವೆ.

10–10 ಎ. ಎಂ.

ಶ್ರೀ ವಾಟಾಳ್ ನಾಗರಾಜ್ :– ಈ ವರ್ಷ ಎಷ್ಟು ಮಾಡುತ್ತೀರಿ ?

ಶ್ರೀ ಧರ್ಮಸಿಂಗ್ :– ಈ ವರ್ಷ ಐದನೇ ಒಂದರಷ್ಟು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎಂ. ವಿ. ವೆಂಕಟಪ್ಪ :– ಈ ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ಏನು ಹೊಸದಾಗಿ ತೆಗೆದು ಕೊಳ್ಳುತ್ತೀರಿ, ಇವರಲ್ಲಿ ಮಹಿಳಾ ಕಾನ್‌ಸ್ಟೇಬಲ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆಗೆದುಕೊಳ್ಳಬೇಕು. ಕಾರಣ ವೇನೆಂದರೆ, ಇತ್ತೀಚೆಗೆ ಅನೇಕ ಕಡೆ, ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ, ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಕಾರ್ಯಕ್ರಮಗಳು ನಡೆದಾಗ ಮಹಿಳೆಯರು ಕೂಡ ಪಾಲ್ಗೊಳ್ಳುವಂಥ ಸಂದರ್ಭಗಳು ಬೇಕಾದಷ್ಟು ಇವೆ. ಇಂತಹ ಸಂದರ್ಭದಲ್ಲಿ ಪುರುಷ ಕಾನ್‌ಸ್ಟೇಬಲ್‌ಗಳು ಬರುವುದು ಸರಿಯಾಗಿ ಕಾಣುವುದಿಲ್ಲ. ಅದಕ್ಕೋಸ್ಕರ

ಮಹಿಳಾ ಪೋಲೀಸರನ್ನು ಸ್ವಲ್ಪ ಹೆಚ್ಚಾಗಿ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಕೊನೆಯಪಕ್ಷ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಾದರೂ ಇವರ ಸಂಖ್ಯೆ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಧರ್ಮಸಿಂಗ್ :– ಮಾಡಲೇಬೇಕಾಗುತ್ತದೆ, ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :– ಈ ರಾಜ್ಯದಲ್ಲಿ ಪೋಲೀಸರ ಸಂಖ್ಯೆಯನ್ನು ಜಾಸ್ತಿ ಮಾಡುವ ಬಗ್ಗೆ ಸರ್ಕಾರ ಒಂದು ನಿರ್ಧಾರ ತೆಗೆದುಕೊಂಡಿದೆ ಎಂದು ಹೇಳುತ್ತಿದ್ದೀರಿ. ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯದಲ್ಲಿ ಪೋಲೀಸರ ಸಂಖ್ಯೆ ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ ಎಂದು ಹೇಳುತ್ತೀರಾ ? ಇನ್ನೊಂದು ಪ್ರಶ್ನೆ ಏನೆಂದರೆ, ಈ ವರ್ಷ ಎಷ್ಟು ಪೋಲೀಸ್ ಸ್ಟೇಷನ್‌ಗಳನ್ನು ಕರ್ನಾಟಕ ರಾಜ್ಯದಲ್ಲಿ ಮಾಡ ಬೇಕೆಂದು ಇದ್ದೀರಿ ? ನನ್ನ ಕ್ಷೇತ್ರವಾದ ಚಾಮರಾಜನಗರ ತಾಲ್ಲೂಕು ಬಹಳ ಸೂಕ್ಷ್ಮವಾದ ಕ್ಷೇತ್ರ. ಈ ಸಂದರ್ಭದಲ್ಲಿ ಅಲ್ಲಿ ಒಂದು ಪೋಲೀಸ್ ಸ್ಟೇಷನ್ ಕೊಡುವುದಕ್ಕೆ ಭರವಸೆ ಕೊಡುತ್ತೀರಾ ? ಮತ್ತೆ ಈ ಪೋಲೀಸ್ ಕಾನ್‌ಸ್ಟೇಬಲ್‌ಗಳೇನು ಇದ್ದಾರೆ, ಅವರಿಗೆ ಚಳುವಳಿ ಗಿಳುವಳಿ ನಡೆದಾಗ ಕೊಡತಕ್ಕಂಥ ದಿನಭತ್ಯೆ ಏಳು ರೂಪಾಯಿ.....

ಅಧ್ಯಕ್ಷರು :– ಚಳುವಳಿ ಸರಿ; ಆದರೆ ಈ ಗಿಳುವಳಿ ಯಾವುದು ?

(ನಗು)

ಶ್ರೀ ವಾಟಾಳ್ ನಾಗರಾಜ್ :– ಇಂತಹ ಸಂದರ್ಭಗಳಲ್ಲಿ ಅವರಿಗೆ ಬರೀ ಏಳು ರೂಪಾಯಿ ದಿನಭತ್ಯೆ ಕೊಡುತ್ತಿದ್ದಾರೆ. ಅದನ್ನು ಜಾಸ್ತಿಮಾಡಿ ಒಂದು ದಿನದ ವೇತನವನ್ನಾದರೂ ಕೊಡುವುದಕ್ಕೆ ಸರ್ಕಾರ ತೀರ್ಮಾನ ಮಾಡುತ್ತದೆಯೇ ?

ಶ್ರೀ ಧರ್ಮಸಿಂಗ್ :– ಈಗಾಗಲೇ ನಾವು 5 ವರ್ಷಗಳ ಅವಧಿಯಲ್ಲಿ 383 ರೂರಲ್ ಪೋಲೀಸ್ ಸ್ಟೇಷನ್ಸ್, 199 ಟೌನ್ ಪೋಲೀಸ್ ಸ್ಟೇಷನ್ಸ್, ಮಾಡಬೇಕೆಂದು ಮಾಡಿದ್ದೇವೆ. ಇದರಲ್ಲಿ ಈ ವರ್ಷ 5ನೇ ಒಂದು ಭಾಗದಷ್ಟು ಮಾಡಲು ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದಾಗ 11 ಪೋಲೀಸ್ ಸ್ಟೇಷನ್‌ಗಳಿಗೆ ಶಿಫಾರಸ್ಸು ಮಾಡಿದ್ದಾರೆ. ಅದು ಸಾಲದು, ಇನ್ನೂ ಹೆಚ್ಚು ಮಾಡಬೇಕಾಗಿದೆ. ನಿಮ್ಮ ಚಾಮರಾಜನಗರಕ್ಕೂ ಏನು ಬೇಡತಕ್ಕದ್ದು ಇದೆ, ಅದು ಕೂಡ ಪರಿಶೀಲನೆಯಲ್ಲಿದೆ. ಭತ್ಯೆ ವಿಚಾರದಲ್ಲಿ ಕೂಡ ಈಗಾಗಲೇ ವಿಚಾರ ಮಾಡಿದ್ದೇವೆ. ಅದನ್ನು ಹೆಚ್ಚಿಸತಕ್ಕದ್ದನ್ನು ಕೂಡ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :– ಬೇರೆ ರಾಜ್ಯಗಳಿಗೆ ಹೋಲಿಸಿದರೆ ?

ಶ್ರೀ ಧರ್ಮಸಿಂಗ್ :– ಈಗ ಕರ್ನಾಟಕದಲ್ಲಿ 1,475 ಜನರಿಗೆ ಒಬ್ಬ ಕಾನ್‌ಸ್ಟೇಬಲ್ ಇದ್ದಾರೆ. ಬೇರೆ ರಾಜ್ಯ-ಗಳಲ್ಲಿ ಬೇರೆ ಬೇರೆ ರೀತಿ ಇದೆ. ಮಹಾರಾಷ್ಟ್ರದಲ್ಲಿ 383 ಜನರಿಗೆ ಒಬ್ಬ ಕಾನ್‌ಸ್ಟೇಬಲ್ ಇದ್ದಾನೆ. ಬೇರೆ ರಾಜ್ಯ ಗಳಿಗೆ ಹೋಲಿಸಿದರೆ ನಮ್ಮಲ್ಲಿ ಸ್ವಲ್ಪ ಕಡಿಮೆ ಇದೆ. ಅದಕ್ಕಾಗಿ ಇನ್ನು ಐದು ವರ್ಷಗಳಲ್ಲಿ ನಾವು ಒಂದು ಸ್ಕೀಮ್‌ನ್ನು ಹಾಕಿಕೊಂಡಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ :– ಪರಿಜನ ಗಿರಿಜನ ಪದವೀಧರರಿಗೆ ಉದ್ಯೋಗ ಅವಕಾಶ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 279 (1173)

ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪರಿಜನ ಗಿರಿಜನ ಪದವೀಧರರ ಸಂಖ್ಯೆ ಎಷ್ಟು ? ಇವರುಗಳಲ್ಲಿ ಸ್ಪೈಫಂಡರಿ ಪದವೀಧರರ ಸಂಖ್ಯೆ ಎಷ್ಟು ?

ಆ) ಇದರಲ್ಲಿ ಪ್ರಥಮ ದರ್ಜೆಯ ಪದವೀಧರರೆಷ್ಟು ? ಇವರಿಗೆ ವಿಶೇಷ ನೇಮಕಾತಿಯಲ್ಲಿ ನೌಕರಿ ಕೊಡಲು ಸರ್ಕಾರ ಉದ್ದೇಶಿಸಿದೆಯೇ ?

ಇ) ಇದುವರೆವಿಗೂ ವಿಶೇಷ ನೇಮಕಾತಿಯಲ್ಲಿ ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲಾಗಿದೆ.

ಈ) ವಿಶೇಷ ನೇಮಕಾತಿಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ? ಅವುಗಳನ್ನು ಭರ್ತಿ ಮಾಡುವ ಯೋಜನೆ ಸರ್ಕಾರಕ್ಕಿದೆಯೇ ?